ಬಯಲಾಟದಲ್ಲಿ ಯುವಜನತೆಯ ಪಾಲ್ಗೊಳ್ಳುವಿಕೆ: ಒಂದು ಅವಲೋಕನ

ಹುಲುಗಯ್ಯ ನಾಯಕರ್[1] & ಕೆ. ರಾಮಕೃಷ್ಣಯ್ಯ[2]

[1]ಸಂಶೋಧನಾ ವಿದ್ಯಾರ್ಥಿ, ಪ್ರದರ್ಶನ ಕಲಾವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

[2]ಪ್ರಾಧ್ಯಾಪಕರು, ಪ್ರದರ್ಶನ ಕಲಾವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15343712

ABSTRACT:

ಬಯಲಾಟವು ನಮ್ಮ ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ಸ್ಥಾನಮಾನವನ್ನು ಪಡೆದ ಜಾನಪದ ರಂಗ ಕಲೆಯಾಗಿದೆ. ಈ ರಂಗ ಕಲಿಯು ಸುಮಾರು 150 ರಿಂದ 300 ವರ್ಷಗಳ ಹಿಂದಿನ ಇತಿಹಾಸ ಹೊಂದಿದೆ ಎಂಬುದು ಬಯಲಾಟ ಕೃತಿಗಳಿಂದ ಮತ್ತು ಕೆಲವು ವಿದ್ವಾಂಸರಗಳಿಂದ ತಿಳಿದು ಬಂದಿದೆ. ಇದಕ್ಕಿಂತ ಪೂರ್ವದಲ್ಲೂ ಬಯಲಾಟದ ಕುರುಹುಗಳು ಇರುವುದರ ಬಗ್ಗೆ ಇತಹಾಸವು ಕೆಲವು ಉದಾಹರಣೆಗಳಂದಿಗೆ ಸ್ಪಷ್ಟಪಡಿಸಲು ಯತ್ನಸಿದೆ. ಇಂತಹ ಬಯಲಾಟದಲ್ಲಿ ಇಂದಿನ ಯುವಜನತೆ ತೊಡಿಕೊಳ್ಳುವುದು ಬಹಳ ಜರೂರಿನ ಸಂಗತಿಯಾಗಿ ಕಂಡುಬರುತ್ತದೆ. ಏಕೆಂದರೆ ಈ ಬಯಲಾಟವು ಹಿಂದಿನ ಕಾಲದ ಅನಕ್ಷರಸ್ಥ ಜನತೆಗೆ ನಮ್ಮ ನಾಡಿನ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುತ್ತಾ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಸಹಬಾಳ್ವೆಯೊಂದಿಗೆ ಸಾರ್ಥಕತೆಯ ಜೀವನವನ್ನು ಸಾಗಿಸುವ ದಾರಿಯನ್ನು ತೋರಿಸುತ್ತಾ ಬಂದಿದೆ. ಪ್ರಪಂಚಕ್ಕೆ ಮಾದರಿ ಎನಿಸಿದ ನಮ್ಮ ಭಾರತ ಸಂಸ್ಕೃತಿಯ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದ ಪ್ರಾಮುಖ್ಯತೆಯನ್ನು ಮತ್ತು ಅದರ ಮೌಲ್ಯಗಳನ್ನು ಬಿತ್ತರಿಸುತ್ತ ಜನರನ್ನು ಆ ನಿಟ್ಟಿನಲ್ಲಿ ಮೌಲ್ಯಯುತ ಬದುಕು ಕಟ್ಟಿಕೊಳ್ಳುವಲ್ಲಿ ಬಯಲಾಟಗಳು ಸಂವಹನ ಮಾಧ್ಯಮಗಳಂತೆ ಕಾರ್ಯ ನಿರ್ವಹಿಸುತ್ತಿವೆ. ಪ್ರಸ್ತುತ ಜಗತ್ತಿನಲ್ಲಿ ಯುವಜನತೆ ತಮ್ಮ ಕೆಲಸದ ಒತ್ತಡಗಳಿಂದ ಮತ್ತು ಜೀವನದ ನಿರ್ವಹಣೆಯ ಕೆಲವು ಸಮಯದಲ್ಲಿ ಸರಿಯಾಗಿ ನಿರ್ವಹಿಸದೆ ಜೀವನದಲ್ಲಿ ಹತಾಶರಾಗಿ ಮೊಬೈಲ್‌ಗೆ ದಾಸರಾಗಿ ತಮ್ಮ ಜೀವನದ ಮೌಲ್ಯವನ್ನು ತಿಳಿದುಕೊಳ್ಳದೆ ಬದುಕಿನ ಸುಂದರ ಕ್ಷಣಗಳನ್ನು ಅನುಭವಿಸಲು ಸಾಧ್ಯವಾಗದೆ ತಮ್ಮ ಜೀವವನ್ನೇ ಕಳೆದುಕೊಳ್ಳುವ ಹಂತಕ್ಕೆ ತಲುಪುತ್ತಿದೆ. ಇದರ ಬದಲಾವಣೆಗಾಗಿ ನಮ್ಮ ಸಂಸ್ಕೃತಿಯ ಅರಿವು ಅವರಲ್ಲಿ ಮೂಡಿಸುವದಕ್ಕಾಗಿ ಬಯಲಾಟವನ್ನು ಮತ್ತಷ್ಟು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಿ ಅದರಲ್ಲಿ ತೊಡೆದುಕೊಳ್ಳುವುದರೊಂದಿಗೆ ಆ ಬಯಲಾಟದಲ್ಲಿ ಬರುವ ಕಥೆ ಮತ್ತು ಅದರ ಪ್ರದರ್ಶನಕ್ಕೆ ಬೇಕಾಗುವ ತಾಂತ್ರಿಕ ಅವಶ್ಯಕತೆಗಳ ಬಗ್ಗೆ ಜ್ಞಾನ ಹೆಚ್ಚಿಸಿಕೊಂಡು ಜೀವನವನ್ನು ಸುಂದರಮಯವಾಗಿಸುವಲ್ಲಿ

ಸಹಕಾರಿಯಾಗಿದೆ ಎಂದರೆ ತಪ್ಪಾಗಲಾರದು. ಈ ಬಯಲಾಟವು ಪ್ರಸ್ತುತ ಮಕ್ಕಳು ಮತ್ತು ಯುವ ಜನತೆಗೆ ಯಾವ ರೀತಿಯಲ್ಲಿ ತಮ್ಮ ಜೀವನವನ್ನು ಸುಂದರವಾಗಿಸಿಕೊಳ್ಳಲು ಸಹಕಾರಿಯಾಗಿದೆ ಎಂಬುದನ್ನು ಕೆಲವು ಕೃತಿಗಳ ಮೂಲಕ ಸಂದರ್ಶನದ ಮೂಲಕ ಮತ್ತು ಬಯಲಾಟದಲ್ಲಿ ತೊಡಗಿರುವ ಹಿರಿಯ ಕಲಾವಿದರುಗಳ ಮೂಲಕ ಇದರಲ್ಲಿರುವ ಮೌಲ್ಯಯುತ ಸಂದೇಶಗಳನ್ನು ಸಾರುವ ಪ್ರಮುಖ ಉದ್ದೇಶವು ಈ ಒಂದು ಕಿರು ಪ್ರಬಂಧವು ಹೊಂದಿದೆ. ಈ ನಿಟ್ಟಿನಲ್ಲಿ ಕೆಲವು ಬಯಲಾಟ ಕಲಾವಿದರನ್ನು ಸಂದರ್ಶಿಸಿ, ಕೃತಿಗಳನ್ನು ಅಭ್ಯಸಿಸಿ ಮಾಹಿತಿ ಸಂಗ್ರಹಿಸಲಾಗಿದೆ.

ಬಯಲಾಟವು ಕುಣಿತ ಪ್ರಧಾನವಾದದ್ದು ಮತ್ತು ಸಂಭಾಷಣೆ ಪ್ರಧಾನವಾದದ್ದು. ಮೊದಲು ಕುಣಿತಕ್ಕೆ ಅಷ್ಟೊಂದು ಪ್ರಾಮುಖ್ಯತೆ ನೀಡಲು ಕಾರಣವೇನು ಇರಬಹುದು ಎಂಬ ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ ತಿಳಿದುಬಂದ ವಿಷಯವೇನಂದರೆ, ಮನುಷ್ಯನಲ್ಲಿ ಹೆಚ್ಚಾಗಿ ಕಾಲುಗಳನ್ನು ಕಠಿಣವಾದ ಕೆಲಸಗಳಿಗೆ ಬಳಸಿ ಎಷ್ಟು ಭದ್ರವಾಗಿಟ್ಟುಕೊಳ್ಳುತ್ತಾನೋ ದೇಹದ ಆರೋಗ್ಯವು ಅಷ್ಟೇ ಭದ್ರವಾಗಿರುತ್ತದೆ ಎನ್ನುವ ಪ್ರತೀತಿಯಿದೆ. ಪ್ರಸ್ತುತ ಕಾಲದಲ್ಲೂ ಸಹ ವಾಕಿಂಗ್, ರನ್ನಿಂಗ್ ಎನ್ನುವ ನೆಪದಲ್ಲಿ ಕಾಲುಗಳನ್ನು ಸದೃಢವಾಗಿ ಇಟ್ಟುಕೊಳ್ಳಬೇಕು ಎನ್ನುವ ಸಲಹೆ ವೈದ್ಯರು ನೀಡುತ್ತಾರೆ. ಕಾಲುಗಳು ಸದೃಢವಾಗಿಟ್ಟುಕೊಳ್ಳುವ ಸಲುವಾಗಿ ಜೋರಾಗಿ ನಡೆಯುವುದು ಅಥವಾ ಓಡುವುದು ಇದರಿಂದ ಕಾಲುಗಳು ಗಟ್ಟಿಗೊಳ್ಳುವುದೊಂದೆ ಅಲ್ಲದೆ ದೇಹದಲ್ಲಿನ ಕೊಬ್ಬಿನ ಅಂಶ ಕರಗುತ್ತದೆ. ಬೆವರು ಕಿತ್ತಿ ಬರುತ್ತದೆ. ಎಲ್ಲಾ ಅಂಗಾಂಗಗಳಲ್ಲೂ ರಕ್ತದ ಚಲನೆ ವೇಗವಾಗಿ ಸಾಗುತ್ತದೆ. ಅದೇ ರೀತಿ ಉಸಿರಾಟ ಮತ್ತು ಎದೆ ಬಡಿತ ಕೂಡ ವೇಗಪಡೆಯುತ್ತದೆ. ಇದರಿಂದ ಒಟ್ಟಾರೆ ದೇಹದ ಆರೋಗ್ಯ ಉತ್ತಮ ರೀತಿಯಲ್ಲಿಟ್ಟುಕೊಳ್ಳಲು ಸಾಧ್ಯ. ಹಾಗೆಯೇ ಈ ಜೋರಾದ ಸಂಭಾಷಣೆ, ಗಹಗಹಿಸಿ ನಗುವುದರಿಂದ ಗಂಟಲಿಗೆ ಸಂಬಂಧಿಸಿದ ಯಾವುದೇ ಕಾಯಿಲೆಗಳು ಬರಲಾರವು. ಬಯಲಾಟದಲ್ಲಿ ಕಬ್ಬಿಣದ ಕಡಲೆಗಳಂತೆ ಭಾಸವಾಗುವ ಪ್ರಾಸಾನುಪ್ರಾಸ ಹೊಂದಿದ ಸಂಭಾಷಣೆ ಗಂಟಲಿನ ವ್ಯಾಯಾಮಕ್ಕೂ ಅನುಕೂಲವಾಗುತ್ತದೆ. ಹಾಗೆಯೇ ಬಾಯಿಯಲ್ಲಿರುವ ಯಾವುದೇ ಅಹಿತಕರವಾದ ಸೂಕ್ಷ್ಮಾಣು ಜೀವಿಗಳು ಕೂಡ ಆ ಉಚ್ಚಾರಣೆಗೆ ಸತ್ತು ಹೋಗುತ್ತವೆ. ಹಾಗಾಗಿ ಕುಣಿತದಿಂದ ಕಾಲುಗಳು ಗಟ್ಟಿಗೊಂಡು ದೇಹದ ಆರೋಗ್ಯ ವೃದ್ಧಿಸುವಂತೆ, ಕಂಠ ಅಂದರೆ ಧ್ವನಿಯನ್ನು ಬಳಸುವುದರಿಂದ ಗಂಟಲಿನ ಆರೋಗ್ಯ ಕಾಪಾಡಿಕೊಳ್ಳುವುದರ ಜೊತೆಗೆ ಒಟ್ಟಾರೆ ದೇಹದ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ಇಟ್ಟುಕೊಳ್ಳಲು ಈ ಎರಡು ಅಂಗಾಂಗಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ ಎಂಬುದನ್ನು ಬಯಲಾಟದಲ್ಲಿ ಭಾಗವಹಿಸಿದವರು ತಮ್ಮ ಸ್ವ ಅನುಭವದ ಮೂಲಕ ತಿಳಿಸಿದ್ದಾರೆ. ಪ್ರಸ್ತುತ ವೈದ್ಯರು ಕೂಡ ಸಲಹೆ ನೀಡುವಂತೆ ಕಾಲಿನ ಗಟ್ಟಿತನವೇ ದೇಹದ ಕಟ್ಟಿತನ ಮತ್ತು ಗಂಟಲಿಗೆ ಸಂಬಂಧಿಸಿದಂತೆ ಕೆಲವು ಕರ್ಕಶ ಶಬ್ದದ ರೀತಿಯಲ್ಲಿ ಗಂಟಲಿನ ವ್ಯಾಯಾಮಗಳನ್ನು ಹೇಳಿಕೊಡುತ್ತಾರೆ. ಹಾಗೆಯೇ ಹಿಂದಿನ ಕಾಲದಲ್ಲಿ ಈ ಕಠಿಣವಾದ ಶಬ್ದಗಳನ್ನು ಉಚ್ಚಾರಣೆ ಮಾಡುವುದರ ಮೂಲಕ ಆ ಗಂಟಲಿನ ಆರೋಗ್ಯವನ್ನು ವೃದ್ಧಿಸುಲು

ಬಹಳಷ್ಟು ಅನುಕೂಲವಾಗಿತ್ತು ಎಂಬುದು ಈ ಬಯಲಾಟಗಳ ಮೂಲಕ ನಾವು ತಿಳಿಯಬಹುದು. ಹಾಗಾಗಿ ಯಾವುದೇ ಮನುಷ್ಯ ಅನಾರೋಗ್ಯದಿಂದ ಇದ್ದರೆ ಅವನು ಬಯಲಾಟದಲ್ಲಿ ಪಳಗಿದರೆ ಅತ್ಯಂತ ಉತ್ತಮವಾದ ಆರೋಗ್ಯ ಪಡೆಯುತ್ತಾನೆಂಬದು ಈಗಲೂ ಪ್ರಸ್ತುತದಲ್ಲಿರುವ ಮಾತಾಗಿದೆ.

KEYWORDS:

ಭಾರತಿಯ ಸಂಸ್ಕೃತಿ, ಮಹಾಕಾವ್ಯಗಳು, ಯುವಜನತೆ, ಬಯಲಾಟ ಕಲಾವಿದರು, ಹೆಜ್ಜೆಕುಣಿತ, ಸಂಭಾಷಣೆ.

ಪೀಠಿಕೆ:

ಬಯಲಾಟವೆನ್ನುವುದು ನಮ್ಮ ಕರ್ನಾಟಕ ಜಾನಪದ ರಂಗಭೂಮಿ ಕಂಡಂತಹ ಒಂದು ಅದ್ಭತವಾದ ಗಂಡು ಕಲೆ. ಗಂಡು ಕಲೆ ಎಂದಾಗ ಕೆಲವರು ಕೇಳುತ್ತಾರೆ ಅದು ಹೇಗೆ ಗಂಡುಕಲೆ ಎಂದು ಕರೆಸಿಕೊಳ್ಳುಲು ಸಾಧ್ಯ ಮಹಿಳೆಯರು ಅದರಲ್ಲಿ ಪಾತ್ರ ಮಾಡುವುದಿಲ್ಲವೇನು? ಬಯಲಾಟದಲ್ಲಿ ಮಹಿಳೆಯರೂ ಪಾತ್ರಮಾಡುತ್ತಾರೆ. ಆದರೆ ಈ ಬಯಲಾಟ ತನ್ನ ಜೀವಾಳವೆನಿಸಿಕೊಂಡಿರುವ ಕುಣಿತಗಳಿಗೆ ಮತ್ತು ಪ್ರಾಸ – ಅನುಪ್ರಾಸಗಳನ್ನೊಳಗೊಂಡ ದೀರ್ಘವಾದ ಸಂಭಾಷಣೆಗಳಿಗೆ ಪ್ರಾಧಾನ್ಯತೆ ನೀಡಿರುವ ಜಾನಪದ ರಂಗ ಕಲೆಯಾಗಿದೆ. ಹಾಗಾಗಿ ಇದನ್ನು ಸಮರ್ಥವಾಗಿ ನಿಭಾಯಿಸಲು ಪುರುಷರ ಗಡುಸುತನವೇ ಬೇಕಾಗುತ್ತದೆ. ಅಂದರೆ ಬಲಿಷ್ಠವಾದ ದೇಹ, ಧ್ವನಿಯನ್ನು ಬೇಡುತ್ತದೆ ಈ ರಂಗಕಲೆ. ಸಾಧಾರಣವಾಗಿ ಮಹಿಳೆಯರು ಎಂದಾಗ ಸೂಕ್ಷ್ಮತೆ, ಕೋಮಲತೆ, ಮೃದುತ್ವ ಮತ್ತು ವನಪು ವೈಯರಗಳು ಹೊಂದಿರುವುದು ಪ್ರಕೃತಿ ಸಹಜವಾಗಿ ಕಂಡುಬರುವಂತಹದು ಸರ್ವಸಾಮಾನ್ಯ. ಆದರೆ ಈ ಬಯಲಾಟದಲ್ಲಿ ಈ ಮೃದುತ್ವ, ಕೋಮಲತೆಗಳು ಬಹಳಷ್ಟು ಕಡಿಮೆ. ಹಾಗಾಗಿ ಈ ಬಯಲಾಟದ ಪಾತ್ರಗಳು ಕುಣಿಯುವಾಗ ಭಾರವಾದ ವಸ್ತ್ರಾಭರಣಗಳನ್ನು ತೊಟ್ಟು ಕುಣಿಕುಣಿದು ಸಂಭಾಷಣೆ ಹೇಳುತ್ತ ಅಭಿನಯಿಸುವುದರಿಂದ ಗಂಡು ಕಲೆ ಎಂಬುದಾಗಿ ಕರೆಯುತ್ತಿರಬಹುದು ಎಂದು ಕೆಲವು ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮುಖ್ಯವಾದ ಮತ್ತೊಂದು ವಿಷಯವೆಂದರೆ ಇಲ್ಲಿ ಪ್ರಸ್ತುತಪಡಿಸುತ್ತಿರುವ ಬಯಲಾಟವು ಮೂಡಲಪಾಯ ಬಯಲಾಟವಾಗಿದೆ. ಏಕೆಂದರೆ ಬಯಲಾಟವನ್ನು ಭೌಗೋಳಿಕ ದೃಷ್ಟಿಯಿಂದ ಸ್ಥೂಲವಾಗಿ ಪಡುವಲಪಾಯ ಮತ್ತು ಮೂಡಲಪಾಯಗಳೆಂಬ ಎರಡು ಪ್ರಭೇದಗಳಲ್ಲಿ ಗುರುತಿಸಿರುವುದನ್ನು ನೋಡಬಹುದು. ಪಡುವಲಪಾಯವು ಕಾಸರಗೋಡು ಪ್ರದೇಶವು ಸೇರಿದಂತೆ ಕರಾವಳಿ ಕರ್ನಾಟಕದ ಉಡುಪಿ, ಮಂಗಳೂರು, ಉತ್ತರ ಕನ್ನಡ ಹಾಗೂ

ಚಿಕ್ಕಮಗಳೂರು, ಶಿವಮೊಗ್ಗವನ್ನೊಳಗೊಂಡಂತೆ ಮಲೆನಾಡು ಭಾಗಗಳಲ್ಲಿ ರೂಢಿಯಲ್ಲಿರುವ ಪ್ರಕಾರವಾಗಿದೆ. ಆದರೆ ಮೈಸೂರಿನಿಂದ ತೊಡಗಿ ಬಯಲು ಸೀಮೆ ಹೈದರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗಗಳಲ್ಲಿ ಕಂಡುಬರುತ್ತದೆ ಈ ಮೂಡಲಪಾಯ ಬಯಲಾಟ. ಪಡುವಲಪಾಯವು ಯಕ್ಷಗಾನವೆಂದೇ ಪ್ರಖ್ಯಾತಿ ಪಡೆದಿದ್ದು ಇದಕ್ಕೆ ಸಂಬಂಧಿಸಿದಂತೆ ಉತ್ತರ ಕನ್ನಡತಿಟ್ಟು, ಬಡುಗುತಿಟ್ಟು, ತೆಂಕುತೆಟ್ಟುಗಳೆಂಬ ಪ್ರಭೇದಗಳನ್ನು ಒಳಗೊಂಡಿದ್ದರೆ ಮೂಡಲಪಾಯದಲ್ಲಿ ಘಟ್ಟದ ಕೋರೆ, ಮೂಡಲಪಾಯ, ಬಯಲಾಟ, ದೊಡ್ಡಾಟ, ಸಣ್ಣಾಟ ಎಂಬ ಪ್ರಬೇದಗಳನ್ನು ಗುರುತಿಸಿರುವುದು ಕಂಡುಬರುತ್ತದೆ. ಪ್ರಸ್ತುತ ಈ ಪ್ರಬಂದಕ್ಕೆ ಸಂಬಂಧಿಸಿದಂತೆ ಹೈದರಾಬಾದ್ ಕರ್ನಾಟಕ ಅಂದರೆ ಕಲ್ಯಾಣ ಕರ್ನಾಟಕವೆಂದು ಕರೆಯಲ್ಪಡುವ ಈ ಭಾಗದ ಬಯಲಾಟವನ್ನು ಗಣನೆಗೆ ತೆಗೆದುಕೊಂಡಿದೆ. ಈ ಭಾಗದಲ್ಲಿ ಇದಕ್ಕೆ ಬಯಲಾಟ, ಅಟ್ಟದಾಟ, ದೊಡ್ಡಾಟ, ಬಯಲು ನಾಟಕ ಎಂದೆಲ್ಲಾ ಕರೆಯಲಾಗುತ್ತದೆ.

ಇತಿಹಾಸ:

ಬಯಲಾಟವು ನಮ್ಮ ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ಸ್ಥಾನಮಾನವನ್ನು ಪಡೆದ ಜಾನಪದ ರಂಗ ಕಲೆಯಾಗಿದೆ. ಈ ರಂಗ ಕಲಿಯು ಸುಮಾರು 150 ರಿಂದ 300 ವರ್ಷಗಳ ಹಿಂದಿನ ಇತಿಹಾಸ ಹೊಂದಿದೆ ಎಂಬುದು ಬಯಲಾಟ ಕೃತಿಗಳಿಂದ ಮತ್ತು ಕೆಲವು ವಿದ್ವಾಂಸರಗಳಿಂದ ತಿಳಿದು ಬಂದಿದೆ. ಇದಕ್ಕಿಂತ ಪೂರ್ವದಲ್ಲೂ ಬಯಲಾಟದ ಕುರುಹುಗಳು ಇರುವುದರ ಬಗ್ಗೆ ಇತಹಾಸವು ಕೆಲವು ಉದಾಹರಣೆಗಳಂದಿಗೆ ಸ್ಪಷ್ಟಪಡಿಸಲು ಯತ್ನಸಿದೆ. ಬಯಲಾಟದ ಸಂಕ್ಷಿಪ್ತ ಇತಿಹಾಸವನ್ನು ನೋಡುವುದಾದರೆ ಸದ್ಯಕ್ಕೆ ದೊರೆಯುವ ಮೂಡಲಪಾಯದ ಅತ್ಯಂತ ಹಳೆಯ ಅಸ್ತಪ್ರತಿ ‘ಕುಮಾರರಾಮ’ ಇದು ಧಾರವಾಡದಲ್ಲಿ ಸುರ್ಜಾಸಿಂಗ ಇವರಿಂದ 1856 ರಲ್ಲಿ ಮುದ್ರಣಗೊಂಡ ಕೃತಿಯ ನಕುಲು ಪ್ರತಿ. (ಇದನ್ನು ಲೇಖಕರ ಗಮನಕ್ಕೆ ತಂದವರು ಶ್ರೀ ಎಸ್. ಬಿ. ನಾಯಕ ಉಪ ನಿರ್ದೇಶಕರು ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ ಅವರು ಈ ಪ್ರತಿ ಅವರ ಸಂಗ್ರಹದಲ್ಲಿದೆ) 1900 ರ ಸುಮಾರಿಗೆ ಬಳ್ಳಾರಿಯಲ್ಲಿ ಮುದ್ರಣಗೊಂಡ ಮೂಡಲಪಾಯ ಬಯಲಾಟಗಳು ನೋಡಲು ಸಿಗುತ್ತವೆ. ಆದುದರಿಂದ 1900 ರ ಪೂರ್ವದಲ್ಲಿ 19ನೇ ಶತಮಾನದ ಉತ್ತರಾರ್ಧದಲ್ಲಿ ಈ ಆಟಗಳು ರಂಗಭೂಮಿಗೆ ಬಂದಿರಬಹುದೆಂದು ಧಾರಾಳವಾಗಿ ಹೇಳಬಹುದು. ಇದೇ ಅವಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಬಯಲಾಟದ ಮೇಳಬಂದು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರದರ್ಶನ ನೀಡಿದುದಾಗಿ ತಿಳಿದುಬರುತ್ತದೆ.[1] ಆದರೆ ಬಯಲಾಟಗಳು ಯಕ್ಷಗಾನದ ಮೇಳಗಳಂತೆ ತಿರುಗಾಟ ಮಾಡುವ ಪದ್ದತಿಯನ್ನು ಅಳವಡಿಸಿಕೊಂಡಿಲ್ಲ. ಇದು ಸ್ಥಳೀಯವಾಗಿ ಬಯಲಾಟದಲ್ಲಿ ಆಸಕ್ತಿ ಇರುವವರು ಸೇರಿ ಹಿರಿಯರ ಮತ್ತು ಬಯಲಾಟದ

ಹಾರ್ಮೋನಿಯಮ್ ಮಾಸ್ಟರುಗಳ ಮಾರ್ಗದರ್ಶನದಲ್ಲಿ ಕಲಿತು ತಮ್ಮ ಊರಲ್ಲೇ ಪ್ರದರ್ಶನಕ್ಕೊಳಪಡುವ ಕಲೆಯಾಗಿ ಕಂಡು ಬರುತ್ತದೆ.

ಬಯಲಾಟದ ಪ್ರಸಂಗಗಳಲ್ಲಿ ಕುಡುತಿನಿಯ ಭೀಮೇಶನ ಸ್ತುತಿಯಿದೆ. ಬಳ್ಳಾರಿ ಜಿಲ್ಲೆಯ ಕುಡುತಿನಿಯ ಭೀಮೇಶನೇ ಬಯಲಾಟದ ಬಹುಪಾಲು ಪ್ರಸಂಗ ಕರ್ತರಿಗೆ ಆರಾಧ್ಯ ದೈವವಾಗಿದ್ದಾನೆ. ಈ ಪ್ರಸಂಗಗಳನ್ನು ಬರೆದ ಕವಿಗಳೂ ಹಂಪೆ, ರಾಮಸಾಗರ, ಕಂಪಲಿ, ಕುಡುತಿನಿ ಮುಂತಾದ ಊರಿಗೆ ಸೇರಿದವರಿದ್ದಾರೆ. ಇದೆಲ್ಲವನ್ನೂ ನೋಡಿದರೆ ಹಂಪೆಯ ಸುತ್ತಣ ಪ್ರದೇಶದಲ್ಲಿಯೇ ಬಯಲಾಟವು ಹುಟ್ಟಿ ಬೆಳೆದಿರಬೇಕೆಂಬ ಅಭಿಪ್ರಾಯಕ್ಕೆ ಅವಕಾಶವಾಗುತ್ತದೆ. ಹತ್ತೊಂಬತ್ತನೆ ಶತಮಾನದಿಂದಲೂ ಉತ್ತರ ಕರ್ನಾಟಕದಲ್ಲಿ ನೂರಾರು ಬಯಲಾಟಗಳು ಪ್ರಚಲಿತವಿದ್ದುವಂತೆ. ಅವೆಲ್ಲವುಗಳ ಸಂಗ್ರಹಣೆ, ಸಮಗ್ರವಾದ ಅಧ್ಯಯನ ನಡೆದಿಲ್ಲವಾದರೂ ಸುಮಾರು ಎಂಬತ್ತಕ್ಕೂ ಮಿಕ್ಕಿದ ಸಂಖ್ಯೆಯ ದೊಡ್ಡಾಟಗಳ ಪ್ರಸಂಗಗಳನ್ನು ವಿದ್ವಾಂಸರು ಉದಾಹರಣೆಯಾಗಿ ನೀಡುತ್ತಾರೆ.

ಉದ್ದೇಶ:

ಕರ್ನಾಟಕ ಜಾನಪದ ಕಲಾಪ್ರಕಾರಗಳಲ್ಲಿ ಸತ್ವಯುತ ಕಲಾ ಪ್ರಕಾರವೆಂದು ಹೇಳಲ್ಪಡುವ ಈ ಬಯಲಾಟವು ಹಾಡುಗಾರಿಕೆ, ವೇಷ ಭೂಷಣ, ಕುಣಿತ, ವರ್ಣಾಲಂಕಾರ, ವಸ್ತ್ರಾಲಂಕಾರ, ಹಿಮ್ಮೇಳ, ಮುಮ್ಮೇಳಗಳನ್ನು ಒಳಗೊಂಡಿದೆ. ರಾಮಾಯಣ, ಮಹಾಭಾರತ, ದೇವಿ ಮಹತ್ಮೆ, ರೇಣುಕ ಯಲ್ಲಮ್ಮನ ಕಥೆ, ಭಗವದ್ಗೀಗಳನ್ನೊಳಗೊಂಡತ ಕಥೆ, ಉಪಕಥೆಗಳಲ್ಲಿ ಬರುವಂತ ವಸ್ತುವನ್ನು ಪ್ರದರ್ಶನ ನೀಡುವುದರ ಮೂಲಕ ಜನರಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವ ಮಹತ್ವದ ಪಾತ್ರ ನಿರ್ವಯಿಸುವ ಜಾನಪದ ಕಲಾಪ್ರಕಾರವೇ ಈ ಬಯಲಾಟವಾಗಿದೆ. ಇಂದಿನ ಯುವಜನತೆ ಮತ್ತು ಮುಂದಿನ ಪೀಳಿಗೆಯವರು ಈ ಬಯಲಾಟ ಕಲೆಯಲ್ಲಿ ಪಾಲ್ಗೊಳ್ಳುವುದರಿಂದ ಉತ್ತಮ ಜೀವನ ವಿಧಾನ ರೂಢಿಸಿಕೊಳ್ಳಲು ಸಾಧ್ಯ ಎಂಬುದನ್ನು ತಿಳಿಸುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ಇಂದಿನ ಯುವ ಜನತೆ ಎದುರಿಸುತ್ತಿರುವ ಸಮಸ್ಯೆಗಳು:

1. ಮೊಬೈಲ್ ದಾಸರಾಗಿ ಹಲವಾರು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ.
2. ಮಾಡುವ ಕೆಲಸ ಕಾರ್ಯಗಳಲ್ಲಿ ಮಾನಸಿಕ ಒತ್ತಡ ಅನುಭವಿಸುತ್ತಿದ್ದಾರೆ.
3. ಪರಿಸರ ಮತ್ತು ಸಂಬಂಧಗಳಲ್ಲಿ ಅಂತರ ಹೆಚ್ಚುತ್ತಿದೆ.
4. ಸುಂದರವಾದ ಸಾಂಸಾರಿಕ ಜೀವನವನ್ನು ಕಳೆದುಕೊಳ್ಳುತ್ತಿದ್ದಾರೆ.
5. ಜೀವನದ ಬಗ್ಗೆ ನಿರಾಶಕ್ತಿ ತೋರುತ್ತಿದ್ದಾರೆ. ಇನ್ನು ಮುಂತಾದವು. . . .

ಈ ವಿಷಯಕ್ಕೆ ಪೂರಕವಾಗುವಂತೆ ಬಯಲಾಟದ ನಿರ್ದೇಶಕರು, ಹಾರ್ಮೋನಿಯಂ ಮಾಸ್ಟರ್, ತಬಲವಾದಕರು ಮತ್ತು ಬಯಲಾಟದ ಸಂಘಟಕರಾದ ಹಲವಾರು ಹಿರಿಯ ಬಯಲಾಟದ ರಂಗಕರ್ಮಿಗಳನ್ನು ಸಂದರ್ಶನ ಮಾಡಲಾಗಿದೆ. ಅವರುಗಳಲ್ಲಿ ಮುಖ್ಯವಾಗಿ

1. ಸಂಡೂರಿನ ಮೌನಾಚಾರಿ– ಬಯಲಾಟದ ಹಾರ್ಮೋನಿಯಂ ಮಾಸ್ತ್ರು ಮತ್ತು ನಿರ್ದೇಶಕರು
2. ಮುದ್ದಟ್ನೂರು ತಿಪ್ಪೇಸ್ವಾಮಿ– ಬಯಲಾಟದ ಹಾರ್ಮೋನಿಯಂ ಮಾಸ್ತ್ರು, ಕಲಾವಿದರು, ನಿರ್ದೇಶಕರು ಮತ್ತು ಸಂಘಟಕರು.
3. ಬಾದನಹಟ್ಟಿ ಕರಿಬಸವನಗೌಡ– ಬಯಲಾಟ ಹಾರ್ಮೋನಿಯಂ ಮಾಸ್ತ್ರು, ರಿದಮ್ ಪ್ಯಾಡ್ ವಾದಕರು ಮತ್ತು ನಿರ್ದೇಶಕರು
4. ವಿಠಲಾಪುರದ ತಿಪ್ಪೇಸ್ವಾಮಿ– ಬಯಲಾಟದ ಕಲಾವಿದರು, ನಿರ್ದೇಶಕರು ಮತ್ತು ಬಯಲಾಟ ಕೃತಿ ರಚನಾಕಾರರು. ಇನ್ನು ಮುಂತಾದವರು.

ಬಯಲಾಟದಲ್ಲಿ ಪಾಲ್ಗೊಳ್ಳುವುದರಿಂದ ಆಗುವ ಪ್ರಯೋಜನಗಳು:

1. ಸಮಯ ಪ್ರಜ್ಞೆ:

“ಬಯಲಾಟದ ಮಾತುಗಳಲ್ಲಿ ಶಬ್ದವನ್ನು ಗಟ್ಟಿಯಾಗಿ ಹೇಳುವುದು ರೂಢಿಯಾಗಿದೆ. ಒಂದು ಅಕ್ಷರವನ್ನು ಹೆಚ್ಚು ಸಂಖ್ಯೆಯಲ್ಲಿ ಆವರ್ತಗೊಳಿಸುವುದರಿಂದ ಅದು ನೆನಪಿನಲ್ಲಿ ಸಹಜವಾಗಿ ಉಳಿಯುವಂತಾಗುತ್ತದೆ. ಬಯಲಾಟ ಕವಿಗಳ ಮಾತಿನ ಶೈಲಿಯಲ್ಲಿ ಇದೊಂದು ವಿಶಿಷ್ಟ ಗುಣ. ಎಷ್ಟೇ ಗ್ರಾಂಥಿಕ ವಾಕ್ ಪ್ರೌಢಿಮೆಯನ್ನು ಮೆರೆಯಬಹುದಾದರೂ ಆಟಗಳಲ್ಲಿನ ಮಾತುಗಳು ಪ್ರೇಕ್ಷಕರ ಎದುರಿಗೆ ಸಂವಹನಗೊಳ್ಳಬೇಕಾದರೆ ಒಂದು ವಿಶಿಷ್ಟ ಮಾಧ್ಯಮದಲ್ಲಿಯೇ ಅವನ್ನು ಅಳವಡಿಸಿಕೊಳ್ಳಬೇಕು. ಬಯಲಾಟಗಳಲ್ಲಿ ಈ ರೀತಿಯ ಸಮೂಹ ಮಾಧ್ಯಮ ಧ್ವನಿಗಳು ಅಕ್ಷರಗಳು ಮಾತ್ರವಾಗದೆ ಅವು ನಾದ ಗುಣದಿಂದ ವಿವಿಧ ಸ್ತರಗಳಲ್ಲಿ ಕೇಳಿಬರುತ್ತವೆ.”[2] ಇಂದಿನ ಯುವಜನತೆ ಶೈಕ್ಷಣಿಕವಾಗಿ ವಿವಿಧ ಪಧವಿಗಳನ್ನು ಪೂರೈಸಿದಮೇಲೆ ಉದ್ಯೋಗ ಪಡೆಯುವುದಕ್ಕಾಗಿ ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುತ್ತಾರೆ. ಈ ರೀತಿಯ ಸಿದ್ಧತೆಯ ಸಮಯದಲ್ಲಿ ಯಾವುದೇ ರೀತಿಯ ದೈಹಿಕ ಶ್ರಮವಿಲ್ಲದೆ ಕೇವಲ ಕುಳಿತು ಓದುವುದರಿಂದ ದೈಹಿಕ ಸಾಮರ್ಥ್ಯದಲ್ಲಿ ಅಸಮತೋಲನೆ ಉಂಟಾಗಿ ಆರೋಗ್ಯವು ಕ್ಷೀಣಿಸುವ ಸಂದರ್ಭ ಹೆಚ್ಚಾಗುತ್ತಿದೆ. ಇವರುಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಜೊತೆಗೆ ಬಲಾಟಗಳಲ್ಲಿ ತೊಡಗುವುದರಿಂದ ಹಲವಾರು ಬಯಲಾಟದ ಕಲಾವಿದರೊಂದಿಗೆ ಸ್ನೇಹ ಮನೋಭಾವನೆ ಬೆಳೆದು ಅವರು ಜೀವಿಸುವ ವಿಧಾನಗಳನ್ನು ಮತ್ತು ತಮ್ಮ ಜೀವನ ನಿರ್ವಹಣೆಗಾಗಿ ಮಾಡುತ್ತಿರುವ ಕೆಲಸಗಳ ಬಗ್ಗೆ ತಿಳಿದು ತಾವು ಸ್ಪರ್ಧಾತ್ಮಕ ಪರೀಕ್ಷೆಗಳೊಂದಿಗೆ ಜೀವನ

ನಿರ್ವಹಣೆಗಾಗಿ ಯಾವೆಲ್ಲ ಕೆಲಸಗಳನ್ನು ಮಾಡಬಹುದು ಮತ್ತು ಆ ಎಲ್ಲಾ ಕೆಲಸಗಳಿಗನುಗುಣವಾಗಿ ಸಮಯದ ನಿರ್ವಹಣೆ ಹೇಗೆ ಮಾಡುವುದು ಎಂಬುದರ ಬಗ್ಗೆ ಯೋಚಿಸುವಂತೆ ಮಾಡುವುದರ ಮೂಲಕ ಸಮಯ ಪ್ರಜ್ಞೆ ಮೂಡುವಂತೆ ಮಾಡುತ್ತದೆ.

2. ಶಿಸ್ತಿನ ಜೀವನ ಶೈಲಿ:

ಬಯಲಾಟವು ಕುಣಿತ ಪ್ರಧಾನವಾದದ್ದು ಮತ್ತು ಸಂಭಾಷಣೆ ಪ್ರಧಾನವಾದದ್ದು. ಮೊದಲು ಕುಣಿತಕ್ಕೆ ಅಷ್ಟೊಂದು ಪ್ರಾಮುಖ್ಯತೆ ನೀಡಲು ಕಾರಣವೇನು ಇರಬಹುದು ಎಂದು ಅದನ್ನು ಸೂಕ್ಷ್ಮವಾಗಿ ಗಮನಿಸಿದರೆ ಮನುಷ್ಯನಲ್ಲಿ ಹೆಚ್ಚಾಗಿ ಕಾಲುಗಳನ್ನು ಕಠಿಣವಾದ ಕೆಲಸಗಳಿಗೆ ಬಳಸಿ ಎಷ್ಟು ಭದ್ರವಾಗಿಟ್ಟುಕೊಳ್ಳುತ್ತಾನೋ ದೇಹದ ಆರೋಗ್ಯವು ಅಷ್ಟೇ ಭದ್ರವಾಗಿರುತ್ತದೆ ಎನ್ನುವ ಪ್ರತೀತಿಯಿದೆ. ಪ್ರಸ್ತುತ ಕಾಲದಲ್ಲೂ ಸಹ ವಾಕಿಂಗ್, ರನ್ನಿಂಗ್ ಎನ್ನುವ ನೆಪದಲ್ಲಿ ಕಾಲುಗಳನ್ನು ಸದೃಢವಾಗಿ ಇಟ್ಟುಕೊಳ್ಳಬೇಕು ಎನ್ನುವ ಸಲಹೆ ವೈದ್ಯರು ನೀಡುತ್ತಾರೆ. ಕಾಲುಗಳು ಸದೃಢವಾಗಿಟ್ಟುಕೊಳ್ಳುಲು ಜೋರಾಗಿ ನಡೆಯುವುದು ಅಥವಾ ಓಡುವುದು ಇದರಿಂದ ಕಾಲುಗಳು ಗಟ್ಟಿಗೊಳ್ಳುವುದೊಂದೆ ಅಲ್ಲದೆ ದೇಹದಲ್ಲಿನ ಕೊಬ್ಬಿನ ಅಂಶ ಕರಗುತ್ತದೆ. ಬೆವರು ಸುರಿಯುವುದರೊಂದಿಗೆ ಎಲ್ಲಾ ಅಂಗಾಂಗಗಳಲ್ಲೂ ರಕ್ತದ ಚಲನೆ ವೇಗವಾಗಿ ಸಾಗುತ್ತದೆ. ಆ ಸಮಯದಲ್ಲಿ ಉಸಿರಾಟ ಮತ್ತು ಎದೆ ಬಡಿತ ಕೂಡ ವೇಗವಾಗಿರುತ್ತದೆ. ಇದರಿಂದ ಒಟ್ಟಾರೆ ದೇಹದ ಆರೋಗ್ಯ ಉತ್ತಮ ರೀತಿಯಲ್ಲಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಹಾಗೆಯೇ ಈ ಜೋರಾದ ಸಂಭಾಷಣೆ, ಗಹಗಹಿಸಿ ನಗುವುದರಿಂದ ಗಂಟಲಿಗೆ ಸಂಬಂಧಿಸಿದ ಯಾವುದೇ ಕಾಯಿಲೆಗಳು ಬರಲಾರವು. ಹಾಗಾಗಿ ಬಯಲಾಟದಲ್ಲಿ ಕಬ್ಬಿಣದ ಕಡಲೆಗಳಂತೆ ಭಾಸವಾಗುವ ಪ್ರಾಸಾನುಪ್ರಾಸ ಹೊಂದಿದ ಸಂಭಾಷಣೆ ಗಂಟಲಿನ ವ್ಯಾಯಾಮಕ್ಕೂ ಅನುಕೂಲವಾಗುತ್ತದೆ. ಬಾಯಿಯಲ್ಲಿರುವ ಯಾವುದೇ ಅಹಿತಕರವಾದ ಸೂಕ್ಷ್ಮಾಣು ಜೀವಿಗಳು ಕೂಡ ಆ ಉಚ್ಚಾರಣೆಗೆ ಸತ್ತು ಹೋಗುತ್ತವೆ. ಹಾಗಾಗಿ ಕುಣಿತದಿಂದ ಕಾಲುಗಳು ಗಟ್ಟಿಗೊಂಡು ದೇಹದ ಆರೋಗ್ಯ ವೃದ್ಧಿಸುವಂತೆ, ಕಂಠ ಅಂದರೆ ಧ್ವನಿಯನ್ನು ಬಳಸುವುದರಿಂದ ಗಂಟಲಿನ ಆರೋಗ್ಯ ಕಾಪಾಡಿಕೊಳ್ಳುವುದರ ಜೊತೆಗೆ ಒಟ್ಟಾರೆ ದೇಹದ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ಇಟ್ಟುಕೊಳ್ಳಬಹುದು. ಪ್ರಸ್ತುತ ವೈದ್ಯರು ಕೂಡ ಸಲಹೆ ನೀಡುವಂತೆ ಕಾಲಿನ ಗಟ್ಟಿತನವೇ ದೇಹದ ಕಟ್ಟಿತನ ಮತ್ತು ಗಂಟಲಿಗೆ ಸಂಬಂಧಿಸಿದಂತೆ ಕೆಲವು ಕರ್ಕಶ ಶಬ್ದದ ರೀತಿಯಲ್ಲಿ ಗಂಟಲಿನ ವ್ಯಾಯಾಮಗಳನ್ನು ಹೇಳಿಕೊಡುತ್ತಾರೆ. ಹಾಗೆಯೇ ಹಿಂದಿನ ಕಾಲದಲ್ಲಿ ಈ ಕಠಿಣವಾದ ಶಬ್ದಗಳನ್ನು ಉಚ್ಚಾರಣೆ ಮಾಡುವುದರ ಮೂಲಕ ಆ ಗಂಟಲಿನ ಆರೋಗ್ಯವನ್ನು ವೃದ್ಧಿಸುವ ಬಹಳಷ್ಟು ಅನುಕೂಲವಾಗಿತ್ತು ಎಂಬುದು ಈ ಬಯಲಾಟಗಳ ಮೂಲಕ ನಾವು ತಿಳಿಯಬಹುದು. ಯಾವುದೇ ಮನುಷ್ಯ

ಅನಾರೋಗ್ಯದಿಂದ ಇದ್ದರೆ ಅವನು ಬಯಲಾಟದಲ್ಲಿ ಪಳಗಿದರೆ ಶಿಸ್ತಿನ ಜೀವನ ಶೈಲಿ ರೂಡಿಸಿಕೊಂಡು ಉತ್ತಮವಾದ ಆರೋಗ್ಯ ಪಡೆಯುತ್ತಾನೆಂಬದು ಈಗಲೂ ಪ್ರಸ್ತುತದಲ್ಲಿರುವ ಮಾತಾಗಿದೆ.

3. ಸುಂದರವಾದ ಅಂತರ್ದೃಷ್ಟಿ:

ಪ್ರಪಂಚಕ್ಕೆ ಮಾದರಿ ಎನಿಸಿದ ನಮ್ಮ ಭಾರತ ಸಂಸ್ಕೃತಿಯ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಪ್ರಾಮುಖ್ಯತೆಯನ್ನು ಮತ್ತು ಅದರ ಮೌಲ್ಯಗಳನ್ನು ಬಿತ್ತರಿಸುತ್ತ ಜನರನ್ನು ಆ ನಿಟ್ಟಿನಲ್ಲಿ ಮೌಲ್ಯಯುತ ಬದುಕು ಕಟ್ಟಿಕೊಳ್ಳುವಲ್ಲಿ ಬಯಲಾಟಗಳು ಸಂವಹನ ಮಾಧ್ಯಮಗಳಂತೆ ಕಾರ್ಯ ನಿರ್ವಹಿಸಿವೆ. ಪ್ರಸ್ತುತ ಕಾಲದಲ್ಲಿ ಯುವಜನತೆ ತಮ್ಮ ಕೆಲಸದ ಒತ್ತಡಗಳಿಂದ ಮತ್ತು ಜೀವನದ ನಿರ್ವಹಣೆಯ ಕೆಲವು ಸಮಯದಲ್ಲಿ, ತಮ್ಮ ಕಾರ್ಯಗಳನ್ನು ನಿರ್ವಹಿಸದೆ ಜೀವನದಲ್ಲಿ ಹತಾಶರಾಗಿ, ಮೊಬೈಲ್‌ಗೆ ದಾಸರಾಗಿ, ತಮ್ಮ ಜೀವನದ ಮೌಲ್ಯವನ್ನು ತಿಳಿದುಕೊಳ್ಳದೆ, ಜೀವನದ ಸುಂದರ ಕ್ಷಣಗಳನ್ನು ಅನುಭವಿಸಲು ಸಾಧ್ಯವಾಗದೆ ತಮ್ಮ ಜೀವವನ್ನೇ ಕಳೆದುಕೊಳ್ಳುವ ಹಂತಕ್ಕೆ ತಲುಪುತ್ತಿದೆ. ಇದರ ಬದಲಾವಣೆಗಾಗಿ ನಮ್ಮ ಸಂಸ್ಕೃತಿಯ ಅರಿವು ಅವರಲ್ಲಿ ಮೂಡಿಸುವುದಕ್ಕಾಗಿ ಬಯಲಾಟವನ್ನು ಮತ್ತಷ್ಟು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಿ ಅವರನ್ನು ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕಾಗಿದೆ.

ಬಯಲಾಟದ ಪ್ರಸಂಗಗಲ್ಲಿ ಧರ್ಮ-ಅಧರ್ಮ, ನ್ಯಾಯ-ಅನ್ಯಾಯಗಳನಡುವೆ ಯುದ್ಧ ನಡೆದು ಧರ್ಮವು ಗೆಲ್ಲುತ್ತದೆ. ಈ ಬಯಲಾಟಗಳು ನ್ಯಾಯ, ನೀತಿ, ಧರ್ಮಗಳಿಗೆ ಸಂಬಂಧಿಸಿದಂತೆ ಒಂದು ಮಾನವೀಯ ಗುಣಗಳನ್ನು ಜನರಲ್ಲಿ ಬೆಳೆಸಲು ಸಹಾಯಕವಾಗಿವೆ. ಹಾಗಾಗಿ ನ್ಯಾಯಯುತವಾಗಿ ಮತ್ತು ಧರ್ಮಯುತವಾಗಿ ಮನುಷ್ಯನು ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಮುನ್ನಡೆಯಬೇಕೆಂಬುದನ್ನು ಕೂಡ ಇಲ್ಲಿ ನಾವು ತಿಳಿಸಿಕೊಡಬಹುದು. ಈ ಬಯಲಾಟದಲ್ಲಿ ಬರುವಂತಹ ಪಾತ್ರಗಳ ಬಗ್ಗೆ ಮತ್ತು ಅವುಗಳ ಗುಣ ಸ್ವಭಾವಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸಿ ಜೀವನವನ್ನು ಸುಂದರಮಯವಾಗಿಸುವಲ್ಲಿ ಸಹಕಾರಿಯಾಗುತ್ತವೆ ಎಂದರೆ ತಪ್ಪಾಗಲಾರದು.

4. ದೈಹಿಕ ಆರೋಗ್ಯದ ವೃದ್ಧಿ:

ಆರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದ ಅನೇಕರು ಬಯಲಾಟದ ಕಲೆಯಲ್ಲಿ ತೊಡಗಿಕೊಂಡು ಇತರ ಕಲಾವಿದರೊಂದಿಗೆ ತಾವು ಕುಣಿತಗಳನ್ನು, ಬಯಲಾಟದ ಮಾತುಗಳನ್ನು ಕಲಿತು ಅಭಿನಯಿಸುವುದರೊಂದಿಗೆ ತಮ್ಮ ಆರೋಗ್ಯವನ್ನು ಸಹ ಸುಧಾರಿಸಿಕೊಂಡಿದ್ದಾರೆ. "ಬಯಲಾಟದಲ್ಲಿ 'ಆಟ' ಎನ್ನುವ ಪದ ಪ್ರಮುಖವಾಗಿರುವುದರಿಂದ ಈ 'ಆಟ' ಎನ್ನುವುದಕ್ಕೆ A Dance, Acting, or stage

performance, A show ಎಂದರೆ ಕುಣಿತ, ಅಭಿನಯ, ರಂಗ ಪ್ರದರ್ಶನ ಎನ್ನುವ ಅರ್ಥಗಳು ತಮಿಳು, ಮಲಯಾಳಂ, ಕನ್ನಡ, ತೆಲುಗು, ತುಳು ಮುಂತಾದ ದ್ರಾವಿಡ ಭಾಷೆಗಳಲ್ಲಿ ದೊರೆತಿರುವುದರಿಂದ, ಇದು ದ್ರಾವಿಡ ಮೂಲಪದವೆಂಬುದು ನಮಗೆ ಕೆಟಲ್ ಕೋಶದಿಂದ ಖಚಿತವಾಗುತ್ತದೆ."[3] ಇಷ್ಟೆಲ್ಲಾ ಅರ್ಥಗಳನ್ನು ಹೊಂದಿರುವ ಬಯಲಾಟವು ಇದರ ಕಲಿಕೆಯಲ್ಲಿ ತೊಡಗಿಕೊಂಡಿರುವ ಕಲಾವಿದರನ್ನು ರೋಗಮುಕ್ತರನ್ನಾಗಿಸುತ್ತದೆ. ಈ ನಿಟ್ಟಿನಲ್ಲಿ ಹಲವು ಕಲಾವಿದರನ್ನು ಸಂದರ್ಶಿಸಿದಾಗ ತಮಗೆ ಇದ್ದ ಸಕ್ಕರೆ ಕಾಯಿಲೆ ಮತ್ತು ರಕ್ತದೊತ್ತಡ ಕಾಯಿಲೆ ಕೂಡ ವಾಸಿಯಾಗಿ ಈಗ ಸಹಜ ಮತ್ತು ಸಾಧಾರಣವಾದ ಜೀವನವನ್ನು ನಡೆಸುತ್ತಿದ್ದೇವೆ ಎನ್ನುತ್ತಿದ್ದಾರೆ. ಆರೋಗ್ಯಕರವಾದ ದೇಹವನ್ನು ಮರಳಿ ಪಡೆದುಕೊಳ್ಳಲು ಸಹಾಯವಾಯಿತು ಈ ಬಯಲಾಟ ಎಂಬುದಾಗಿ ಹೇಳುತ್ತಿದ್ದಾರೆ. ಬಯಲಾಟದ ಕುಣಿತಗಳು ಬಹಳ ಉತ್ತಮವಾದ ವ್ಯಾಯಾಮದ ಚಲನಾಂಶಗಳಿಂದ ಕೂಡಿವೆ. ಸಂಭಾಷಣೆಗಳು ಗಂಟಲಿನ ಮತ್ತು ದೇಹದ ಕಾಯಿಲೆಗಳನ್ನು ಹೋಗಲಾಡಿಸಲು ಮತ್ತು ದೇಹದ ಜೀರ್ಣ ಕ್ರಿಯೆಯನ್ನು ಉತ್ತಮ ಪಡೆಸುವಲ್ಲಿ ಸಹಾಯಕವಾಗಿವೆ ಎಂಬುದಾಗಿ ಹಲವು ಕಲಾವಿದರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ತಿಳಿಸಿದ್ದಾರೆ. ಈ ಹೇಳಿಕೆಗಳ ಆದಾರದಮೇಲೆ ದೈಹಿಕ ಆರೋಗ್ಯದ ವೃದ್ಧಿಮಾಡುವಲ್ಲಿ ಬಯಲಾಟವು ಪ್ರಮುಖ ಪಾತ್ರವಯಿಸುವುದನ್ನು ಮನಗಾಣಬಹುದು.

5. ಸಾಹಿತ್ಯ ಆಸಕ್ತಿ ಹೆಚ್ಚುಳ:

ಸಂಕುಚಿತ ಮನೋಭಾವ ಹೊಂದಿದ ಮಕ್ಕಳು ಮತ್ತು ಯುವಜನತೆ ಬಯಲಾಟದಲ್ಲಿ ತೊಡಗಿದಾಗ ವೀರಾವೇಶದ ಸಂಭಾಷಣೆ ಮತ್ತು ಲಯಬದ್ಧವಾದ ಕುಣಿತ ಕಲಿತು ಪ್ರೇಕ್ಷಕರ ಎದುರಿಗೆ ಪ್ರದರ್ಶನ ನೀಡುವುದರಿಂದ ಅವರಲ್ಲಿರುವ ಸಂಕೋಚದ ಮನೋಭಾವ ಕಳೆದು ಇತರರೊಂದಿಗೆ ಧೈರ್ಯವಾಗಿ ಮಾತನಾಡುವ ಸಾಮರ್ಥ್ಯವು ಮತ್ತು ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳುವಲ್ಲಿ ಸಹಾಯಕವಾಗಿರುವುದನ್ನು ಅವರ ಪೋಷಕರು ತಿಳಿಸಿರುವುದನ್ನು ನೋಡಬಹುದು. ಬಯಲಾಟದ ಮಾತುಗಳನ್ನು ಕಂಠಪಾಠಮಾಡಿ ಮಾತಿಗೆ ತಕ್ಕಂತೆ ರಸಭಾವಗಳನ್ನು ವ್ಯಕ್ತಪಡಿಸಲು ಸುಮಾರು ಮೂರರಿಂದ ನಾಲ್ಕು ತಿಂಗಳಿಗೂ ಹೆಚ್ಚು ಸಮಯದವರೆಗೆ ಅಭ್ಯಾಸ ಮಾಡಬೇಕಾಗುತ್ತದೆ. ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆಗಳೊಂದಿಗೆ ದೇವಿ ಮಹಾತ್ಮೆ, ರೇಣುಕ ಮಹಾತ್ಮೆಗಳಂತಹ ಆಧ್ಯಾತ್ಮಿಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವಂಥ ಕೃತಿಗಳ ಅಧ್ಯನಕ್ಕೆ ತೊಡಗುವುದರಿಂದ ಕಲ್ಪನಾಶಕ್ತಿ ಹೆಚ್ಚಗುವುದರೊಂದಿಗೆ ಸಮಾಜದ ಪ್ರಸ್ತುತ ಘಟನೆಗಳನ್ನೊಳಗೊಂಡಂತೆ ಕೃತಿಗಳನ್ನು ರಚಿಸುವ ಸಾಮರ್ಥವನ್ನು ಬೆಳೆಸುತ್ತವೆ. ಬಯಲಾಟ ಪ್ರಸಂಗದ ಕೃತಿಗಳನ್ನು ಅಭ್ಯಾಸ ಮಾಡುವ ಸಮಯದಲ್ಲಿ ಸಾಹಿತ್ಯ

ಪರಿಚಯದೊಂದಿಗೆ ಹಾಡುಗಾರಿಕೆ ಪರಿಚಯ, ಸಂಭಾಷಣೆಯ ಪ್ರಾಸಾನುಪ್ರಾಸಗಳೊಂದಿಗೆ ಸ್ಪುಟವಾದ ಉಚ್ಚಾರಣೆ, ಕುಣಿತದ ವಿವಿಧ ಬಗೆಗಳ ಪರಿಚಯ, ವೇಷಭೂಷಣಗಳ ಪರಿಚಯದೊಂದಿಗೆ ಸಹಕಲಾವಿದರು, ತಂತ್ರಜ್ಞರೆನ್ನದೆ ಎಲ್ಲಾ ಸಂಗಡಿಗರೊಂದಿಗೆ ಬೆರೆಯುವ ಮತ್ತು ಹಲವಾರು ಸಾಹಿತಿಗಳ ಪರಿಚಯವು ಹೆಚ್ಚಿಸಿಕೊಳ್ಳಲು ಅವಕಾಶದೊರೆಯುತ್ತದೆ.

6. ಸಂಸ್ಕೃತಿಯ ಅರಿವು:

ಹಳ್ಳಿಯಲ್ಲಿ ವಾಸಿಸುವ ಎಷ್ಟೋ ಜನ ರೈತರು ಮತ್ತು ಹಲವಾರು ಉದ್ಯೋಗಸ್ತರು ತಮ್ಮ ಆರರಿಂದ ಹದಿನಾರು ವರ್ಷದ ಒಳಗಿನ ಮಕ್ಕಳನ್ನು ಕೂಡ ಬಯಲಾಟದಲ್ಲಿ ಕೃಷ್ಣನ ಪಾತ್ರಧಾರಿಯಾಗಿ ಪ್ರವೇಶ ಕೊಡಿಸಿ, ತಮ್ಮ ಜೊತೆ ತಮ್ಮ ಮುಂದಿನ ಪೀಳಿಗೆಯು ಸಾಂಸ್ಕೃತಿಕವಾಗಿ ಭಾಗವಹಿಸುವುದರ ಮೂಲಕ ಬಯಲಾಟ ಕಲೆ ಮುಂದುವರಿಯುವಂತೆ ಪ್ರೇರೇಪಿಸುತ್ತಿದ್ದಾರೆ. ಆರ್ಥಿಕ ಹೊರೆ ಉಂಟಾದರೂ ಕೂಡ ತಮ್ಮ ಮಕ್ಕಳ ಉಜ್ವಲ ಭವಿಷ್ಯ ರೂಪಗೊಳ್ಳಬೇಕು. ಅವರು ಸಮಾಜದಲ್ಲಿ ಸಾಂಸ್ಕೃತಿಕವಾಗಿ ಮುಂದುವರಿಯಂತೆ ಆಗಬೇಕೆನ್ನುವ ನಿಟ್ಟಿನಲ್ಲಿ ತಮ್ಮ ಮಕ್ಕಳನ್ನು ಬೆಳೆಸುತ್ತಿರುವುದುನ್ನು ನೋಡಬಹುದು. ಹೀಗೆ ತೊಡಗಿಕೊಂಡ ಮಕ್ಕಳು ಶಾಲೆಯಲ್ಲಿ ಇತರ ಮಕ್ಕಳೊಂದಿಗೆ ಸ್ನೇಹ ಮನೋಭಾವನೆಯಿಂದ ಮಾನವೀಯ ಪ್ರಜ್ಞೆ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ತಿಳಿದುಕೊಂಡು, ಬೌದ್ಧಿಕವಾಗಿ ಪ್ರಬುಧರಾಗುತ್ತ ಬೆಳೆಯುತ್ತಿರುವುದನ್ನು ನೋಡಬಹುದು. ಸ್ಪರ್ಧಾತ್ಮಕ ಮನೋಭಾವ ಬೆಳೆಸಿ ಕೊಳ್ಳುವುದರೊಂದಿಗೆ ಆಟಗಳಲ್ಲಿ ಭಾಗವಹಿಸಿ ತಮ್ಮ ದೈಹಿಕ ಸಾಮರ್ಥ್ಯವನ್ನು ತೋರಿಸುವುದರಲ್ಲಿ ಮುಂದೆ ಇರುವುದನ್ನು ಕಾಣಬಹುದಾಗಿದೆ. ಹಾಗಾಗಿ ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬುವಂತೆ, ಬೆಳೆಯುವ ಮಕ್ಕಳಲ್ಲಿ ನಮ್ಮ ಜಾನಪದ ರಂಗಭೂಮಿಯಿಂದ ಅತ್ಯಂತ ಜಟಿಲ ಮತ್ತು ಗಂಡು ಕಲೆ ಎನಿಸಿದ ಬಯಲಾಟದ ಕಲಿಕೆ ಉಂಟಾಗಬೇಕೆಂಬುದು ಜರೂರಿನ ಸಂಗತಿಯಾಗಿ ಕಂಡು ಬರುತ್ತದೆ.

ಪ್ರಸ್ತುತ ಆಧುನಿಕ ಯುಗದಲ್ಲಿ ಯುವಜನತೆ ಬಹುತ್ತೇಕವಾಗಿ ಗಂಟೆಗಟ್ಟಲೆ ಮೊಬೈಲ್ ನೋಡುವುದರಲ್ಲಿ, ರೀಲ್ಸ್ ಮಾಡುವುದರಲ್ಲಿ ಕಾಲ ಕಳೆಯುತ್ತಿರುವುದು ಕಂಡುಬರುತ್ತಿದೆ. ಯುವಜನತೆ ಬಯಲಾಟಗಳಲ್ಲಿ ತೊಡಗುವುದರಿಂದ ನಮ್ಮ ಭಾರತೀಯ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆಗಳೊಂದಿಗೆ ದೇವಿ ಮಹಾತ್ಮೆ, ರೇಣುಕ ಮಹಾತ್ಮೆಗಳಂತಹ ಆಧ್ಯಾತ್ಮಿಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವಂಥ ಜನಪದರ ಸಂಸ್ಕೃತಿಯ ಜೊತೆ ನಮ್ಮ ಭಾರತೀಯ ಸಂಸ್ಕೃತಿಯನ್ನು ಅರಿತುಕೊಂಡಂತಾಗುತ್ತದೆ.

ಉಪಸಂಹಾರ:

ಬಯಲಾಟ ಎಂಬ ಈ ಜಾನಪದ ರಂಗ ಕಲಿಯು ಜಾನಪದ ರಂಗಭೂಮಿಯಲ್ಲಿ ಅತ್ಯಂತ ಪ್ರಸಿದ್ಧ ರಂಗ ಕಲೆಯಾಗಿದೆ. ಈ ಬಯಲಾಟವು ಮೊದಲು ಮೌಖಿಕವಾಗಿದ್ದು ತಲೆತಲಾಂತರಗಳಿಂದ ಬೆಳೆದು ಬಂದ ಕಲೆಯಾಗಿದೆ. ನಂತರದಲ್ಲಿ ಅಕ್ಷರರೂಪಕ್ಕೆ ಇಳಿಸಲ್ಪಟ್ಟಿರುವುದು ಕಂಡು ಬರುತ್ತದೆ. ಈ ಜಾನಪದ ರಂಗಕಲೆ ಬಹಳ ಕಷ್ಟಪಟ್ಟು ಕಲಿಯುವಂತಹ ಕಲೆಯಾದರೂ ಕಲಿತ ಮೇಲೆ ಬಹಳ ಇಷ್ಟಪಟ್ಟು ವೈಭವದಿಂದ ಪ್ರದರ್ಶನ ನೀಡುವಂತ ಕಲೆಯಾಗಿದೆ. ಏಕೆಂದರೆ ಈ ಕಲೆಯಲ್ಲಿರುವ ಪ್ರಾಸಾನುಪ್ರಾಸ ಹೊಂದಿದ ಸಂಭಾಷಣೆ, ಹೆಜ್ಜೆಯ ಎಣಿಕೆಯೊಂದಿಗೆ ಮುಂದುವರೆಯುವ ಹೆಜ್ಜೆ ಕುಣಿತಗಳು ಹಾಗೂ ಅದರ ವೇಷಭೂಷಣಗಳು ಮತ್ತು ಅತ್ಯಂತ ವಿಜೃಂಭಣೆಯಿಂದ ಪ್ರದರ್ಶನಕ್ಕೊಳಪಡುವ ರೀತಿ ಎಂಥವರನ್ನು ಮಂತ್ರಮುಗ್ಧರನ್ನಾಗಿಮಾಡಿ ಆಸಕ್ತಿಯಿಂದ ನೋಡುವಂತೆ ಮಾಡುತ್ತದೆ. ಆರರಿಂದ ಹದಿನಾರು ವರ್ಷದ ಒಳಗಿನ ಮಕ್ಕಳು ಕೂಡ ಬಯಲಾಟದಲ್ಲಿ ತೊಡಗಿಕೊಂಡು ತಮ್ಮ ವಾಕ್ ಚಾತುರ್ಯವನ್ನು, ಕುಣಿತದ ದಾಟಿಗಳನ್ನು ಕಲಿತು ವಿಶೇಷವಾದ ಸಾಮರ್ಥ್ಯವನ್ನು ತೋರಿಸುತ್ತಿದ್ದಾರೆ. ಈ ರೀತಿ ತೊಡಗಿಕೊಳ್ಳುವುದರಿಂದ ಮಕ್ಕಳ ದೈಹಿಕ ಸಾಮರ್ಥ್ಯ, ಮಾನಸಿಕ ಏಕಾಗ್ರತೆ, ಭಾಷಾ ಜ್ಞಾನ, ಸ್ವಚ್ಛವಾದ ಮತ್ತು ಅದ್ಭುತವಾದ ಉಚ್ಚಾರಣೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗುತ್ತದೆ.

ಈ ಕಲೆಗೆ ನಾಟ್ಯಶಾಸ್ತ್ರದಂತೆ ಸೂತ್ರಿಕರಿಸಿದ ಕೆಲವು ಕೃತಿಗಳನ್ನು ಹೊರತಂದರೆ ತನ್ನದೇ ಆದ ರೀತಿಯಲ್ಲಿ ನಮ್ಮ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಂದು ಉನ್ನತ ಕಲೆಯಾಗಿ ಹೊರಹೊಮ್ಮುವುದರಲ್ಲಿ ಸಂದೇಹವೇ ಇಲ್ಲವೆನಿಸುತ್ತದೆ. ಈ ಆಟವು ರಾಜ್ಯಮಟ್ಟದ ಸ್ಪರ್ಧೆಯಾಗಿ ಪ್ರದರ್ಶನಕ್ಕೆ ಒಳಪಡಬೇಕು. ಆಗ ಬಯಲಾಟದ ಕಲಾವಿದರಿಗೆ ಬಯಲಾಟ ರಚಿಸುವ ರಚನಕಾರರಿಗೆ, ಮುಮ್ಮೇಳ, ಹಿಮ್ಮೇಳ, ತಂತ್ರಜ್ಞರಿಗೆ, ನಿರ್ದೇಶಕರಿಗೆ, ಹಾರ್ಮೋನಿಯಂ ಮಾಸ್ಟರಗಳಿಗೆ ಉದ್ಯೋಗ ವದಗಿದಂತಾಗುತ್ತದೆ. ಈ ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ಈ ಎಲ್ಲಾ ಕಲಾವಿದರನ್ನು ಉಳಿಸಿ, ಬೆಳೆಸಿ ನಮ್ಮ ಸಂಸ್ಕೃತಿಯನ್ನು ಮುಂದಿನ ತಲೆಮಾರುಗಳಿಗೆ ತೆಗೆದುಕೊಂಡು ಹೋಗುವಂತೆ ಮಾಡಬೇಕಾಗಿರುವುದು ಅತ್ಯಂತ ಅನಿವಾರ್ಯದ ಸಂಗತಿಯಾಗಿದೆ. ಏಕೆಂದರೆ ನಮ್ಮ ಭಾರತೀಯ ಮೂಲ ಸಂಸ್ಕೃತಿ ಉಳಿಯಬೇಕು ಉಳಿದು ಬೆಳೆಯಬೇಕು. ಈ ನಿಟ್ಟಿನಲ್ಲಿ ಹಿರಿಯರು, ಕಿರಿಯರು ಹಾಗೂ ವಿದ್ಯಾವಂತ ಯುವಜನತೆ ಬಯಲಾಟದಲ್ಲಿ ಪಾಲ್ಗಳ್ಳುವುದರಿಂದ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಈ ಕಲೆಯು ಪ್ರದರ್ಶನಕ್ಕೊಳಪಡುವಂತೆ ಮಾಡುವ ಆಲೋಚನೆಮೂಡುವುದರ ಮೂಲಕ ಅಂತರಾಷ್ಟ್ರೀಯ ಮನ್ನಣೆ ಗಳಿಸುವಂತೆ ಮಾಡಲು ಶ್ರಮಿಸಬೇಕಾಗಿದೆ.

ಅಡಿ ಟಿಪ್ಪಣಿಗಳು:

1. ಬಸವರಾಜ ಮಲಶೆಟ್ಟಿ, (2008), ಉತ್ತರ ಕರ್ನಾಟಕದ ಬಯಲಾಟಗಳು, ಕೆ. ಎಸ್. ಎಮ್. ಟ್ರಸ್ಟ್, ಬೆಂಗಳೂರು, ಪು. ಸಂ. 59
2. ದುರ್ಗಾದಾಸ್ ಕೆ. ಆರ್. , (1996), ಬಳ್ಳಾರಿ ಜಿಲ್ಲೆಯ ಬಯಲಾಟಗಳು, ಸಮತಾ ಪ್ರಕಾಶನ, ಬೆಳಗಾವಿ, ಪು. ಸಂ. 144
3. ಅದೇ, ಪು.ಸಂ. 1

ಪರಾಮರ್ಶನ ಗ್ರಂಥಗಳು:

1. ಬಸವರಾಜ ಮಲಶೆಟ್ಟಿ, (2008), ಉತ್ತರ ಕರ್ನಾಟಕದ ಬಯಲಾಟಗಳು, ಕೆ. ಎಸ್. ಎಮ್. ಟ್ರಸ್ಟ್, ಬೆಂಗಳೂರು.
2. ದುರ್ಗಾದಾಸ್ ಕೆ. ಆರ್. , (1996), ಬಳ್ಳಾರಿ ಜಿಲ್ಲೆಯ ಬಯಲಾಟಗಳು, ಸಮತಾ ಪ್ರಕಾಶನ, ಬೆಳಗಾವಿ.
3. ರಾಮಚಂದ್ರೇಗೌಡ ಹಿ. ಶಿ. , (1998), ಜಾನಪದ: ಸಾಂಸ್ಕೃತಿಕ ಆಯಾಮಗಳು, ಕನ್ನಡ ಪುಸ್ತಕ ಪ್ರಧಿಕಾರ, ಬೆಂಗಳೂರು.
4. ಶ್ರೀರಾಮ ಇಟ್ಟಣ್ಣವರ, (2019), ಬಯಲಾಟದ ಲೇಖನಗಳು. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಚಕ್ಕೆರೆ ಶಿವಶಂಕರ್, (2008), ಕರ್ನಾಟಕ ಜನಪದ ರಂಗಭೂಮಿ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.
6. ಬೋರಲಿಂಗಯ್ಯ ಹಿ.ಚಿ., (2015), ಕರ್ನಾಟಕದ ಜನಪದ ಕಲೆಗಳ ಕೋಶ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.